ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಛೇರ್ಮನ್‌ರವರೆ, ಇಸ್ರೇಲ್ ಪ್ಯಾಟರ್ನ್ ತರಹ ಇಲ್ಲಿ ಮಾಡಬೇಕೆಂದರೆ ಅಮೇರಿಕಾ ಪ್ಯಾಟರ್ನ್ ನೋಡಿ ಇಲ್ಲಿ ಮಾಡಬಾರದೆ? ಮಿಕ್ಕವೆಲ್ಲವೂ ಕೂಡ ಇಸ್ರೇಲ್ ಮತ್ತು ಸಿಂಗಾಪುರ ಪ್ಯಾಟರ್ನ್. ರೋಡ್ ಮಾಡುವುದಕ್ಕೆ ಅಮೇರಿಕಾ ಪ್ಯಾಟರ್ನ್ ಎಂದರೆ ಅದಕ್ಕೆ ಅಬ್ಜಕ್ಷನ್ ಮಾಡುತ್ತಾರೆ. ಇದೆಂಥ ನ್ಯಾಯ?

ಛೇರ್ಮನ್ : ಜಯಪ್ರಕಾಶ್ ಹೆಗಡೆಯವರೇ, ಈಗ ನಿಮ್ಮ ಪ್ರಶ್ನೆ ಇದೆ. ತಾವು ಕೇಳಿ.

ಉಡುಪಿ ತಾಲ್ಲೂಕಿನಲ್ಲಿರುವ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

179 (796) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ;

ಆ) ಹಾಗಿದ್ದಲ್ಲಿ, ಎಲ್ಲೆಲ್ಲಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು)?

ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಪಶು ಆಸ್ಪತ್ರೆಗಳನ್ನು ಮೇಲ್ದಜೆಗೇರಿಸುವ ಕಾರ್ಯಕ್ರಮ ಇರುವುದಿಲ್ಲ. ಆದರೆ ಸರ್ಕಾರಿ ಆದೇಶ ಸಂಖ್ಯೆ ಪಸಂಮೀ 61 ಪಸಸೆ 2004 ದಿನಾಂಕ: 28–12–2005 ರಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಯಲಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಅನ್ವಯಿಸುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಛೇರ್ಮನ್‌ರವರೆ, ನಾನು ಪ್ರಶ್ನೆಯನ್ನು ಕೇಳುವುದಕ್ಕಿಂತ ಮೊದಲು ನನ್ನದೊಂದು ಸಬ್‌ಮಿಷನ್ ನಿಮಗೆ ಇದೆ. ಈ ರೀತಿಯಾಗಿ ಪ್ರಶ್ನೋತ್ತರ ವೇಳೆಯನ್ನು ನಡೆಸುವುದು ಸರಿಯಲ್ಲ. ಯಾರು ಪ್ರಶ್ನೆ ಕೇಳಿದ್ದಾರೆ ಅವರ ತಾಲ್ಲೂಕಿಗೆ ಸೀಮಿತವಾಗುವಂತೆ ಉತ್ತರ ಕೊಡಿಸಿ. ಆದ್ದರಿಂದ ಬೇರೆಯವರೆಲ್ಲಾ ಕೇಳುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಈ ರೀತಿಯಾದರೆ ಪ್ರಶ್ನೋತ್ತರ ವೇಳೆಯನ್ನು ಎರಡು–ಮೂರು ಗಂಟೆಯವರೆಗೆ ನಡೆಸಿದರೂ ಸರಿಯಾಗುವುದಿಲ್ಲ. ಯಾರು ಪ್ರಶ್ನೆ ಕೇಳಿದ್ದಾರೆ ಆ ಸದಸ್ಯರು ಕೇಳತಕ್ಕಂಥ ಉಪ ಪ್ರಶ್ನೆಗೆ ಮತ್ತು ಅವರು ತಾಲ್ಲೂಕಿಗೆ ಸೀಮಿತವಾಗಿರುವ ಪ್ರಶ್ನೆಗೆ ಉತ್ತರ ಕೊಡಿಸಬೇಕು. ಇಡೀ ರಾಜ್ಯದ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡಬೇಡಿ. ಮತ್ತೆ ಮಂತ್ರಿಗಳೂ ಕೂಡ ಎಲ್ಲದಕ್ಕೂ ಉತ್ತರ ಹೇಳುತ್ತಾ ಹೋದರೆ ಸಮಯ ಕೂಡ ವ್ಯಯವಾಗುತ್ತದೆ. ಆದ್ದರಿಂದ ಇನ್ನು ಮುಂದೆ ಉತ್ತರವನ್ನು ಸ್ವಲ್ಪ ಬ್ರೀಫ್ ಆಗಿ ಹೇಳತಕ್ಕಂಥದ್ದನ್ನು ಮಂತ್ರಿಗಳು ಮಾಡಬೇಕು. ಇದನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಆದ್ದರಿಂದ ಇದನ್ನು ಮಾನ್ಯ ಸಭಾಧ್ಯಕ್ಷರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನನ್ನ ಪ್ರಶ್ನೆ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಓದಿಸಿದ್ದಾರೆ. ಅವರು ನೀಡಿರತಕ್ಕಂಥ ಉತ್ತರವನ್ನು ಓದಿ ಹೇಳಿದರೆ ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ನನ್ನ ಪ್ರಶ್ನೆ ಏನೆಂದರೆ, ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ ಎಂದು ಕೇಳಿದ್ದೇನೆ. ಇದಕ್ಕೆ ಉತ್ತರ ಏನು ಕೊಟ್ಟಿದ್ದಾರೆಂದರೆ, ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇರುವುದಿಲ್ಲ. ಆದರೆ, ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 61 ಪಸಸೆ 2004 ದಿನಾಂಕ: 28–12–2005 ರಲ್ಲಿ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲ್ಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಮತ್ತೆ ಉತ್ತರ ಕೊಟ್ಟಿದ್ದಾರೆ. ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿ ಈ ರೀತಿಯಾದ ಕಾರ್ಯಕ್ರಮ ಇಲ್ಲವೆಂದು ಹೇಳುತ್ತಾರೆ. ಆನಂತರ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳುತ್ತಾರೆ. ಮತ್ತೆ ಪಡುಬಿದ್ರೆಯಲ್ಲಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಬೇಕು. ಮತ್ತೆ ಮಾನ್ಯ ಶಿವಾನಂದಪಾಟೀಲ್‌ರವರು ಒಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೇನು ಉತ್ತರ ಕೊಟ್ಟಿದ್ದಾರೆಂದರೆ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇದೆ ಎಂದು ಹೇಳಿ ನನ್ನ ಪ್ರಶ್ನೆಗೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕೆಂದು ನಾನು ಒಂದು ಪತ್ರವನ್ನು ಬರೆದಿದ್ದೇನೆ. ಆದ್ದರಿಂದ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಹೇಳಿ.

ಡಾ: ವಿ.ಎಸ್. ಆಚಾರ್ಯ (ರೇವೂ ನಾಯಕ್ ಬೆಳಮಗಿಯವರ ಪರವಾಗಿ): ಮಾನ್ಯ ಛೇರ್ಮನ್‌ರವರೆ, ನಾನು ಮಾನ್ಯ ಶಿವಾನಂದ್ ಪಾಟೀಲ್‌ರವರಿಗೆ ಕೊಟ್ಟಿರತಕ್ಕಂಥ ಉತ್ತರ ಏನೆಂದರೆ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಚಿಕಿತ್ಸಾಲಯ ಮಾಡುತ್ತೇವೆಂದು ಮತ್ತು ಚಿಕಿತ್ಸಾಲಯಗಳನ್ನು ಆಸ್ಪತ್ರೆಗಳನ್ನಾಗಿ ಮಾಡುತ್ತೇವೆಂದು ಇದು ನಮ್ಮ ಕಾರ್ಯಕ್ರಮವಾಗಿದೆ. ಆ ಪ್ರಕಾರ ನಮ್ಮ ರಾಜ್ಯದಲ್ಲಿ ಇವತ್ತು 294 ಆಸ್ಪತ್ರೆಗಳಿವೆ. ಇವುಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಆಗುವುದಿಲ್ಲ. ಆದರೆ, ಇವುಗಳ ಕೆಳಗೆ 1451 ಚಿಕಿತ್ಸಾಲಯಗಳಿವೆ. ಅದಕ್ಕಿಂತಲೂ ಕೆಳಗೆ 1456 ಪಶುಕೇಂದ್ರಗಳಿವೆ. ಈಗ ನಿಮಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ಕಳೆದ ವರ್ಷ 145 ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮಾಡಿದ್ದೇವೆ. ಮತ್ತೆ ನೀವು ಕೇಳಿರತಕ್ಕಂಥ ಉಡುಪಿ ಜಿಲ್ಲೆಯ ಪಡುಬಿದ್ರೆಯಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಪಶುಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಉಡುಪಿ ಜಿಲ್ಲಾ ಪಂಚಾಯತ್‌ನಿಂದ ಮೂರು ಪ್ರಸ್ತಾವನೆಗಳು ಅಪ್‌ಗ್ರೇಡೆಶನ್ ಮಾಡುವುದಕ್ಕೆ ಬಂದಿವೆ. ಆ ಪೈಕಿ ಮಾನ್ಯ ಜಯಪ್ರಕಾಶ್‌ರವರ ಕ್ಷೇತ್ರದಲ್ಲಿ ಕುಂಜೆ, ಪೇತ್ರಿ ಮತ್ತು ಪೆರಡೂರು ಎಂದು ಇದೆ. ನಾನು ಈಗಾಗಲೇ ಮಾನ್ಯ ಪಾಟೀಲ್‌ರವರೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ವಿಷಯ ಹೇಳಿದ್ದೇನೆ. ಅದೇನೆಂದರೆ, ಮಾನ್ಯ ನಂಜುಂಡಪ್ಪರವರ ವರದಿ ಪ್ರಕಾರ ಬೇರೆ 131 ಮಾಡಬೇಕೆಂದು ಇದೆ ಎಂದು ಹೇಳಿದ್ದೇನೆ. ಆದ್ದರಿಂದ ಇವುಗಳಲ್ಲಿ ಯಾವುದನ್ನು ಮಾಡಬೇಕೆಂಬುದರ ಬಗ್ಗೆ ಈ ಅಧಿವೇಶನ ಮುಗಿದ ನಂತರ ಅಂದರೆ, ಆಗಸ್ಟ್ ತಿಂಗಳಲ್ಲಿ ಇದರ ಬಗ್ಗೆ ಯೋಚನೆ ಮಾಡುತ್ತೇವೆ. ಆದ್ದರಿಂದ ಸರ್ಕಾರದ ಜೊತೆಗೆ ದಯವಿಟ್ಟು ಎಲ್ಲ ಸದಸ್ಯರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 7 ಗಂಟೆ 31 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ 30ನೇ ಜೂನ್ 2006ರಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)